# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆಗುರುತಿಲ್ಲದ ಪ್ರಶ್ನೆ ಸಂಖ್ಯೆ | : | **256** |
| ಸದಸ್ಯರ ಹೆಸರು | : | ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ<br>(ವಿಧಾನ ಸಭೆಯಿಂದ ಚುನಾಯಿತರಾದವರು) |
| ಉತ್ತರಿಸಬೇಕಾದ ಸಚಿವರು | : | ಮಾನ್ಯ ಸಾರಿಗೆ ಮತ್ತು ಮುಜರಾಯಿ ಸಚಿವರು |
| ಉತ್ತರಿಸಬೇಕಾದ ದಿನಾಂಕ | : | 06-12-2023 |

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ನಕಲಿ ರೈತರು ಬೋನಫೈಡ್ ಸರ್ಟಿಫಿಕೇಟ್ ಪಡೆದು ವಾಣಿಜ್ಯ ಬಳಕೆ ವಾಹನಗಳನ್ನು ಕೃಷಿ ಬಳಕೆಯ ಹೆಸರಿನಲ್ಲಿ ನೋಂದಣಿ ಮಾಡಿಸುತ್ತಿರುವ ಪ್ರಕರಣಗಳು ಬೆಳಕಿಗೆ ಬರುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ ಈ ಬಗ್ಗೆ ಸರ್ಕಾರ ಕೈಗೊಂಡ ಕ್ರಮಗಳೇನು | ಹೌದು, ಸರ್ಕಾರದ ಗಮನಕ್ಕೆ ಬಂದಿರುತ್ತದೆ.<br><br>ರೈತ ಶಕ್ತಿ ಕನ್ನಡ ದಿನಪತ್ರಿಕೆಯಲ್ಲಿ ದಿನಾಂಕ: 03-06-2023 ಮತ್ತು ವಿಜಯವಾಣಿ ದಿನಪತ್ರಿಕೆಯಲ್ಲಿ ದಿನಾಂಕ:07-06-2023 ರಂದು ಕೋಲಾರ ಪ್ರಾದೇಶಿಕ ಸಾರಿಗೆ ಕಛೇರಿಯ ಅಧಿಕಾರಿ / ನೌಕರರು ಟ್ರ್ಯಾಕ್ಟರ್ ನ ನಕಲಿ ಬೋನಫೈಡ್ ಸರ್ಟಿಫಿಕೇಟ್ ದಾಖಲೆಗಳನ್ನು ಸೃಷ್ಟಿಸಿ ಹಗರಣದಲ್ಲಿ ಭಾಗಿಯಾಗಿರುವ ಕುರಿತ ಸುದ್ದಿಯು ಪ್ರಕಟವಾಗಿರುವ ಹಿನ್ನೆಲೆಯಲ್ಲಿ ಸದರಿ ದಿನಪತ್ರಿಕೆಗಳಲ್ಲಿ ಹೇಳಲಾದ ಅಂಶಗಳ ಕುರಿತು ಪರಿಶೀಲಿಸಿ ವಿಚಾರಣೆ ನಡೆಸಿ ಸ್ಪಷ್ಟ ಅಭಿಪ್ರಾಯದೊಂದಿಗೆ ವರದಿಯನ್ನು ಸಲ್ಲಿಸಲು ಜಂಟಿ ಸಾರಿಗೆ ಆಯುಕ್ತರು, ಬೆಂಗಳೂರು (ಗ್ರಾಮಾಂತರ) ವಿಭಾಗ ಇವರಿಗೆ ಸೂಚಿಸಲಾಗಿದೆ.<br><br>ತದನಂತರ, ಎಲೆಕ್ಟ್ರಾನಿಕ್ ಸಿಟಿ, ಕೆ.ಆರ್.ಪುರಂ ಹಾಗೂ ಚಂದಾಪುರ ಪ್ರಾದೇಶಿಕ ಸಾರಿಗೆ ಕಛೇರಿಗಳಲ್ಲಿ ಹಾಗೂ ದೇವನಹಳ್ಳಿ ಸಹಾಯಕ ಪ್ರಾದೇಶಿಕ ಸಾರಿಗೆ ಕಛೇರಿಗಳಲ್ಲೂ ಸಹ ಈ ಬಗ್ಗೆ ಪರಿಶೀಲಿಸಿ ವರದಿಯನ್ನು ನೀಡಲು ಜಂಟಿ ಸಾರಿಗೆ ಆಯುಕ್ತರು ಬೆಂಗಳೂರು (ನಗರ) ವಿಭಾಗ ಇವರಿಗೆ ಸೂಚಿಸಲಾಗಿದೆ.<br><br>ಈ ಬಗ್ಗೆ ವರದಿ ಪಡೆದು ಪರಿಶೀಲಿಸಿ ನಿಯಮಾನುಸಾರ ಕ್ರಮ ವಹಿಸಲಾಗುವುದು. |

--2

| | | |
|---|---|---|
| ಆ) | ಕೃಷಿ ಬಳಕೆಗೆ ಟ್ರ್ಯಾಕ್ಟರ್, ಟ್ರಾಲಿ, ಅಥವಾ ಇನ್ನ್ಯಾವುದೇ ವಾಹನಗಳನ್ನು ಆರ್‌ಟಿಓ ಕಛೇರಿಗಳಲ್ಲಿ ನೋಂದಣಿ ಮಾಡುವ ಸಂದರ್ಭದಲ್ಲಿ ಬೋನಫೈಡ್ ಸರ್ಟಿಫಿಕೇಟ್‌ನ ನೈಜತೆಯನ್ನು ಪರಿಶೀಲಿಸಲು ಯಾವ ಮಾನದಂಡಗಳನ್ನು ಅನುಸರಿಸಲಾಗುತ್ತದೆ ರೈತರಂದು ದೃಢೀಕರಿಸಲು ಯಾವ ಯಾವ ದಾಖಲೆಗಳನ್ನು ಪಡೆಯಲಾಗುತ್ತಿದೆ; | ವ್ಯವಸಾಯದ ಉದ್ದೇಶಕ್ಕೆ ಬಳಸುವ ಟ್ರ್ಯಾಕ್ಟರ್ ಗಳನ್ನು ಸಾರಿಗೇತರ ವರ್ಗದಲ್ಲಿ ನೋಂದಣಿ ಮಾಡುವ ಸಮಯದಲ್ಲಿ ಬೋನಫೈಡ್ ಸರ್ಟಿಫಿಕೇಟ್ ಹಾಜರು ಪಡಿಸುವುದನ್ನು ಕಡ್ಡಾಯ ಗೊಳಿಸಲಾಗಿತ್ತು. ಆದರೆ, ಸದರಿ ಬೋನಫೈಡ್ ಸರ್ಟಿಫಿಕೇಟ್ ಪಡೆಯುವುದು ವಿಳಂಬವಾಗುತ್ತಿರುವ ಕಾರಣ ಮತ್ತು ರೈತರ ಹಿತದೃಷ್ಟಿಯಿಂದ, ಕಂದಾಯ ಇಲಾಖೆಯಿಂದ ನೀಡುವ ಕುಟುಂಬ ವ್ಯವಸಾಯಗಾರರ ಕುಟುಂಬದ ಸದಸ್ಯ ದೃಢೀಕರಣ ಪತ್ರವನ್ನು ನೋಂದಣಿ ಉದ್ದೇಶಕ್ಕೆ ಪರಿಗಣಿಸಲಾಗುತ್ತಿದೆ. ಈ ರೀತಿ ಹಾಜರು ಪಡಿಸಲಾಗುವ ದೃಢೀಕರಣ / ಪ್ರಮಾಣ ಪತ್ರವನ್ನು ಕೂಲಂಕಷವಾಗಿ ಪರಿಶೀಲಿಸಿ ದೃಢೀಪಡಿಸಿಕೊಂಡ ನಂತರವೇ ವ್ಯವಸಾಯದ ಉದ್ದೇಶಕ್ಕೆ ಬಳಸುವ ಟ್ರ್ಯಾಕ್ಟರ್ ಗಳನ್ನು ಸಾರಿಗೇತರ ವರ್ಗದಲ್ಲಿ ನೋಂದಣಿ ಮಾಡಲು ಕ್ರಮ ವಹಿಸಲಾಗುತ್ತಿದೆ. |
| ಇ) | ಬೋನಫೈಡ್ ಸರ್ಟಿಫಿಕೇಟ್ ಅನ್ನು ಪರಿಗಣಿಸಿ ವಾಹನ ನೋಂದಣಿ ಮಾಡಿದ್ದಲ್ಲಿ ರೈತರ ಹೆಸರಿನಲ್ಲಿ ವಾಣಿಜ್ಯ ಬಳಕೆ ವಾಹನಗಳನ್ನು ನೋಂದಣಿ ಮಾಡಿ ಅಕ್ರಮವೆಸಗಿದಂತೆ ಆಗುವುದಿಲ್ಲವೇ; ಟ್ರಾಕ್ಟರ್ ಅಕ್ರಮಕ್ಕೆ ಸರ್ಕಾರವೇ ಪರ್ಮಿಟ್ ಕೊಟ್ಟಂತೆ ಆಗುವುದಿಲ್ಲವೇ? | ಪ್ರಸ್ತುತ ಬೋನಫೈಡ್ ಸರ್ಟಿಫಿಕೇಟ್ ಅಲ್ಲದೆ, ಕಂದಾಯ ಇಲಾಖೆಯಿಂದ ನೀಡುವ ಕುಟುಂಬ ವ್ಯವಸಾಯಗಾರರ ಕುಟುಂಬ ಸದಸ್ಯ ದೃಢೀಕರಣ ಪತ್ರವನ್ನು ನೋಂದಣಿ ಉದ್ದೇಶಕ್ಕೆ ಪರಿಗಣಿಸಲಾಗುತ್ತಿದೆ.<br><br>ರೈತರ ಹೆಸರಿನಲ್ಲಿ ವಾಣಿಜ್ಯ ಬಳಕೆ ವಾಹನಗಳನ್ನು ನೋಂದಣಿ ಮಾಡಿ ಅಕ್ರಮವೆಸಗಿರುವ ಮಾಲೀಕರ ವಿರುದ್ಧ ನಿಯಮಾನುಸಾರ ಕ್ರಮ ವಹಿಸಲಾಗುತ್ತಿದೆ. |

ಟಿಡಿ 63 ಟಿಡಿಕ್ಯೂ 2023

**(ರಾಮಲಿಂಗಾರೆಡ್ಡಿ)**
ಸಾರಿಗೆ ಮತ್ತು ಮುಜರಾಯಿ ಸಚಿವರು.